ಒಗ್ಗಟ್ಟಿನ ಫಲ

ಹಳ್ಳಿಯೊಂದರಲ್ಲಿ ಮೂರು ನಾಯಿಗಳಿದ್ದವು. ಅವು ಯಾವಾಗಲೂ ಪರಸ್ಪರ ಕಚ್ಚಾಡುತ್ತಿದ್ದವು. ಒಮ್ಮೆ ಪಕ್ಕದ ಕಾಡಿನಿಂದ ಆಹಾರ ಅರಸುತ್ತಾ ಚಿರತೆಯೊಂದು ಹಳ್ಳಿಗೆ ಬಂತು. ನಾಯಿಗಳನ್ನು ಕಂಡು ಅದರ ಬಾಯಲ್ಲಿ ನೀರೂರತೊಡಗಿ 'ಆಹಾ... ಎಂತಹ ಸೌಭಾಗ್ಯ? ಒಳ್ಳೆ ಬೇಟೆಗಳೇ ದೊರಕಿದವು! ಹೊಟ್ಟೆ ತುಂಬಾ ಭೂರಿ ಭೋಜನ' ಎಂದುಕೊಳ್ಳುತ್ತ ಬೇಟೆಯಾಡಲು ಹೊಂಚುಹಾಕಿ ನಿಂತಿತು.

ಏಕಾಏಕಿ ಭಯಂಕರ ಚಿರತೆಯನ್ನು ಕಂಡ ನಾಯಿಗಳಿಗೆ ಪ್ರಾಣವೇ ಬಾಯಿಗೆ ಬಂದಂತಾಯ್ತು. ಭಯದಿಂದ ನಡುಗತೊಡಗಿದವು. ಆಗ ನಾಯಿಯೊಂದು ಉಪಾಯ ಹೂಡಿ ಉಳಿದ ನಾಯಿಗಳ ಹತ್ತಿರ ಹೋಗಿ 'ನಾವೀಗ ಅಪಾಯದಲ್ಲಿದ್ದೇವೆ! ನಮ್ಮ ವೈರತ್ವ ಮರೆತು ಒಂದಾಗಿ ಚಿರತೆಯ ವಿರುದ್ಧ ಹೋರಾಡಿ ಕಾಡಿಗೆ ಓಡಿಸ್ಲೇಬೇಕು. ಇಲ್ಲಾಂದ್ರೆ ಅದು ನಮ್ಮನ್ನು ಕೊಂದು ತಿನ್ನದೇ ಬಿಡದು' ಎಂದಾಗ ಅವೆರಡೂ ನಾಯಿಗಳು ಒಪ್ಪಿದವು. ಚಿರತೆ ಜೊತೆ ಹೋರಾಟಕ್ಕೆ ಧೈರ್ಯದಿಂದ ಮುನ್ನುಗ್ಗಿದವು. ಮೂರು ನಾಯಿಗಳ ಜೊತೆ ಚಿರತೆಯು ಭಯಂಕರವಾಗಿ ಕಾದಾಟಕ್ಕಿಳಿಯಿತು. ಚಿರತೆಯನ್ನು ಸುತ್ತುವರಿದ ನಾಯಿಗಳು ಅದನ್ನು ಕಚ್ಚಿ ಕಚ್ಚಿ ಗಾಯಗೊಳಿಸಿದಾಗ ರಕ್ತ ಹರಿಯಲಾರಂಭಿಸಿತು. ನಾಯಿಗಳು ತನ್ನನ್ನು ಜೀವಸಹಿತ ಬಿಡಲಾರವು ಎಂದು ಅರಿತ ಚಿರತೆ ಹೆದರಿ ಅಡವಿಯತ್ತ ಪಲಾಯನಗೈದಿತು. ಅಂದಿನಿಂದ ನಾಯಿಗಳು ವೈರತ್ವ ಮರೆತು ಒಗ್ಗಟ್ಟಿನಿಂದ ಬಾಳಿದವು.

-ಅಮರಯ್ಯಾ ಪತ್ರಿಮಠ, ಸುರಪೂರ

ನಿಮಗೆಷ್ಟು ಗೊತ್ತು

1. ಒಂಗೋಲ್, ಸಾಹೀವಾಲ್, ರೆಡ್‌ಸಿಂಧಿ, ಕಾಂಕ್ರೇಜ್.
2. ಆಪೂಸ್, ನೆಕ್ಕರೆ, ಅಪ್ಪೆಮಿಡಿ, ನೀಲಂ.
3. ಬೆಂಡಾಂಜಿ, ಒರಂಗೂಟನ್, ಬಬೂನ್, ಗೋರಿಲ್ಲಾ.
4. ಬಂಗುಡೆ, ಬೂತಾಯಿ, ಅಂಜಲ, ಸಿಗಡಿ.
5. ಸಾಕರ್, ಗೋಲ್ಫ್, ಪೋಲೋ, ವಾಲಿಬಾಲ್.
6. ಕಥಕ್ಕಳಿ, ಕಥಕ್, ಭರತನಾಟ್ಯ, ಮೋಹಿನಿಯಾಟಂ.
7. ಸಂತೂರ್, ಸಿತಾರ್, ಸರೋದ್, ಸಾರಂಗಿ.

ಇವುಗಳು ಏನು?

8. ನಾಗಸ್ವರ, ಶಹನಾಯಿ, ಸ್ಯಾಕ್ಸೋಫೋನ್, ತುತ್ತೂರಿ.
9. ಫ್ರೆಂಚ್ ಫ್ರೈಸ್, ಪಾಸ್ತಾ, ಪಿಜ್ಜಾ, ಬರ್ಗರ್.

-ಎಸ್. ಜಯಶ್ರೀ ಶೆಣೈ, ಬಂಟ್ವಾಳ

ಉತ್ತರಗಳು: 1.ಗಾಡಿಯ ಗಾಲಿಯ ಕಡ್ಡಿ 2. ಮಾಮಿಯ ಕಡ್ಡಿ 3.ಮಾಸಿದ ಚಾಪೆ 4.ಮಾಸಿದ ಚಾಪೆ 5.ಹೂಗಾಂಗಾರ ಕೈಗೆ 6.ಮಾಣಿ ಸೈಸಿದ 7.ತಂಬೂರಿ 8.ಉಗಾಯಿದ ಮಾಲೆ 9.ಆಗಾಯಿದ (ಮಾಲೆಗೆ)